ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1649 (1894)
ಸದಸ್ಯರ ಹೆಸರು	:	ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ	:	23-03-2021
ಉತ್ತರಿಸುವ ಸಚಿವರು	:	ಮಾನ್ಯ ಪೌರಾಡಳಿತ ಹಾಗೂ ಸಕ್ಕರೆ ಸಚಿವರು.

ಕ್ರ. ಸಂ	ಪ್ರಶ್ನೆ	ಉತ್ತರ
1.	ರಾಜ್ಯದಲ್ಲಿ ಮಂಜೂರಾದ ಇಂದಿರಾ ಕ್ಯಾಂಟೀನ್‌ಗಳ ಸಂಖ್ಯೆ ಎಷ್ಟು; ಅವುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಇಂದಿರಾ ಕ್ಯಾಂಟೀನ್‌ಗಳ ಸಂಖ್ಯೆ ಎಷ್ಟು; ಇವುಗಳಲ್ಲಿ ಆಹಾರದ ಗುಣಮಟ್ಟ ಪರಿಶೀಲಿಸಲು ಸರ್ಕಾರ ಕೈಗೊಂಡ ಕ್ರಮಗಳಾವುವು; (ಸುತ್ತೋಲೆಯ ಪ್ರತಿ ಒದಗಿಸುವುದು)	ಸರ್ಕಾರದ ಆದೇಶ ಸಂಖ್ಯೆ: ನಅಇ 301 ಎಸ್‌ಎಫ್‌ಸಿ 2017 ದಿ: 23-10-2017, 29-11-2017 ಹಾಗೂ 29-12-2017ರಲ್ಲಿ 247 ಇಂದಿರಾ ಕ್ಯಾಂಟೀನ್ ಹಾಗೂ 15 ಅಡುಗೆ ಕೋಣೆಗಳನ್ನು ಮಂಜೂರು ಮಾಡಿ ಆದೇಶಿಸಲಾಗಿರುತ್ತದೆ. ಸರ್ಕಾರದ ಆದೇಶ ಸಂಖ್ಯೆ: ನಅಇ 47 ಎಸ್‌ಎಫ್‌ಸಿ 2018 ದಿ: 07-03-2018ರಲ್ಲಿ ಮೈಸೂರು ಮಹಾನಗರ ಪಾಲಿಕೆಗೆ ಒಂದು ಹೆಚ್ಚುವರಿ ಇಂದಿರಾ ಕ್ಯಾಂಟೀನ್‌ನ್ನು ಮಂಜೂರು ಮಾಡಿ ಆದೇಶಿಸಲಾಗಿರುತ್ತದೆ. **(ಆದೇಶದ ಪ್ರತಿಗಳನ್ನು ಅನುಬಂಧ-1 ರಲ್ಲಿ ಒದಗಿಸಿದೆ)** ಪ್ರಸ್ತುತ ರಾಜ್ಯದಲ್ಲಿ 186 ಇಂದಿರಾ ಕ್ಯಾಂಟೀನ್ ಹಾಗೂ 15 ಅಡುಗೆ ಕೋಣೆಗಳು ಕಾರ್ಯನಿರ್ವಹಿಸುತ್ತಿದೆ. **ಆಹಾರದ ಗುಣಮಟ್ಟ ಪರಿಶೀಲನೆಗೆ ಕೈಗೊಂಡ ಕ್ರಮಗಳು ಈ ಕೆಳಕಂಡಂತಿದೆ :** 1) ಸರ್ಕಾರವು ಆದೇಶ ಸಂಖ್ಯೆ: ನಅಇ 301 ಎಸ್‌ಎಫ್‌ಸಿ 2017 ದಿ: 23-10-2017 ರಲ್ಲಿ ಇಂದಿರಾ ಕ್ಯಾಂಟೀನ್‌ಗಳ ಅನುಷ್ಠಾನ ಮತ್ತು ಮೇಲ್ವಿಚಾರಣೆ ನಡೆಸಲು ಆಯಾ ಜಿಲ್ಲೆಗಳ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಅನುಷ್ಠಾನ ಮತ್ತು ಮೇಲ್ವಿಚಾರಣಾ ಸಮಿತಿ ರಚಿಸಲಾಗಿರುತ್ತದೆ. 1) ಪೌರಾಡಳಿತ ನಿರ್ದೇಶನಾಲಯದ ಪತ್ರ ದಿನಾಂಕ: 07-04-2018ರಲ್ಲಿ ಆಹಾರ ಸರಬರಾಜುದಾರರು ಇಂದಿರಾ ಕ್ಯಾಂಟೀನ್‌ಗಳಲ್ಲಿ ಪ್ರತಿ ಹೊತ್ತು ಸಿದ್ಧಪಡಿಸುವ ಆಹಾರದ ಪ್ರಮಾಣವನ್ನು ಸ್ಥಳೀಯ ಸಂಸ್ಥೆಗಳ ಪರಿಸರ ಅಭಿಯಂತರರು / ಆರೋಗ್ಯ ನಿರೀಕ್ಷಕರು ಪ್ರತಿ ಹೊತ್ತು ಕಡ್ಡಾಯವಾಗಿ ಭೇಟಿ ನೀಡಿ ಆಹಾರ ಗುಣಮಟ್ಟವನ್ನು ಪರಿಶೀಲಿಸಲು ನಿರ್ದೇಶಿಸಲಾಗಿರುತ್ತದೆ.

		2) ಪೌರಾಡಳಿತ ನಿರ್ದೇಶನಾಲಯದ ಪತ್ರ ದಿನಾಂಕ: 20-06-2019ರಲ್ಲಿ ಇಂದಿರಾ ಕ್ಯಾಂಟೀನ್ ಯೋಜನೆಗೆ ಸಂಬಂಧಿಸಿದಂತೆ ಹಲವು ನಿರ್ದೇಶನಗಳನ್ನು ನೀಡಲಾಗಿರುತ್ತದೆ. ಈ ಪೈಕಿ ಮಹಾನಗರ ಪಾಲಿಕೆಗಳ ಜಂಟಿ ಆಯುಕ್ತರು / ಉಪ ಆಯುಕ್ತರು, ಪೌರಾಯುಕ್ತರು / ಮುಖ್ಯಾಧಿಕಾರಿ ರವರು ಸ್ಥಳೀಯ ಸಂಸ್ಥೆ ವ್ಯಾಪ್ತಿಯಲ್ಲಿರುವ ಇಂದಿರಾ ಕ್ಯಾಂಟೀನ್‌ಗಳಿಗೆ ಕಡ್ಡಾಯವಾಗಿ ಕನಿಷ್ಠ 15 ದಿನಗಳಿಗೊಮ್ಮೆ ಭೇಟಿ ನಿಡಿ ಗುಣಮಟ್ಟ, ರುಚಿ, ಸಂಪ್ ಹಾಗೂ ಓವರ್‌ಹೆಡ್ ಟ್ಯಾಂಕ್ ಸ್ವಚ್ಛತೆ ನಿರ್ವಹಣೆ, ಉಪಕರಣಗಳ ಬಳಕೆ ಇತ್ಯಾದಿಗಳನ್ನು ಪರಿಶೀಲಿಸಲು ನಿರ್ದೇಶಿಸಲಾಗಿರುತ್ತದೆ. 3) ಪೌರಾಡಳಿತ ನಿರ್ದೇಶನಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ತಾಂತ್ರಿಕ ಸಿಬ್ಬಂದಿಗಳನ್ನು ಸ್ಥಳೀಯ ಸಂಸ್ಥೆಗಳಲ್ಲಿರುವ ಕ್ಯಾಂಟೀನ್‌ಗಳಿಗೆ ಭೇಟಿ ನೀಡಿ ಶುಚಿತ್ವ, ರುಚಿ, ಆಹಾರದ ಗುಣಮಟ್ಟ ಇತ್ಯಾದಿಗಳನ್ನು ಪರಿಶೀಲಿಸಿ ವರದಿಯನ್ನು ನಿರ್ದೇಶನಾಲಯಕ್ಕೆ ಸಲ್ಲಿಸುವಂತೆ ಪೌರಾಡಳಿತ ನಿರ್ದೇಶನಾಲಯ ರವರ ಆದೇಶ ದಿನಾಂಕ: 04-07-2019ರಲ್ಲಿ ಆದೇಶಿಸಲಾಗಿದ್ದು, ಅದರಂತೆ ವರದಿಯನ್ನು ಸಲ್ಲಿಸಿರುತ್ತಾರೆ (ಪ್ರತಿ ಲಗತ್ತಿಸಿದೆ).
2.	ಇಂದಿರಾ ಕ್ಯಾಂಟೀನ್‌ಗಳ ನಿರ್ವಹಣೆಯ ಜವಾಬ್ದಾರಿಯನ್ನು ಯಾವ ಸಂಸ್ಥೆಯಿಂದ ನಿರ್ವಹಿಸಲಾಗುತ್ತಿದೆ; ನಿರ್ವಹಣೆಗೆ ಮೀಸಲಿಟ್ಟ ಅನುದಾನವೆಷ್ಟು; ಬಿಡುಗಡೆಯಾದ ಅನುದಾನವೆಷ್ಟು; (ವರ್ಷವಾರು, ಜಿಲ್ಲಾವಾರು ವಿವರ ನೀಡುವುದು)	ಸರ್ಕಾರದ ಆದೇಶ ಸಂಖ್ಯೆ: ನಅಇ 301 ಎಸ್‌ಎಫ್‌ಸಿ 2019 ದಿ: 23-10-2019ರಲ್ಲಿ ಮಾರ್ಗಸೂಚಿಯಲ್ಲಿ ಆಹಾರ ಸರಬರಾಜುದಾರರ ಆಯ್ಕೆ ಪ್ರಕ್ರಿಯೆಯನ್ನು ಆಯಾ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ವಹಿಸಿ ಆದೇಶಿಸಲಾಗಿರುತ್ತದೆ. ಅದರಂತೆ, ಟೆಂಡರ್ ಪ್ರಕ್ರಿಯೆ ಅನ್ವಯ ಆಯ್ಕೆಯಾಗುವ ಆಹಾರ ಸರಬರಾಜುದಾರರು ಇಂದಿರಾ ಕ್ಯಾಂಟೀನ್‌ಗಳ ನಿರ್ವಹಣೆಯನ್ನು ಮಾಡುತ್ತಿದ್ದು, ನಗರ ಸ್ಥಳೀಯ ಸಂಸ್ಥೆಗಳ ಆಯುಕ್ತರು / ಪೌರಾಯುಕ್ತರು / ಮುಖ್ಯಾಧಿಕಾರಿಗಳು ನಿರ್ವಹಣೆಯ ಮೇಲ್ವಿಚಾರಣೆ ಜವಾಬ್ದಾರಿಯನ್ನು ಹೊಂದಿರುತ್ತಾರೆ. ಇಂದಿರಾ ಕ್ಯಾಂಟೀನ್‌ಗಳ ನಿರ್ವಹಣೆಗಾಗಿ ಪ್ರತ್ಯೇಕವಾಗಿ ಅನುದಾನವನ್ನು ಒದಗಿಸಲಾಗಿರುವುದಿಲ್ಲ. ಸರ್ಕಾರದ ಆದೇಶ ಸಂಖ್ಯೆ: ನಅಇ 301 ಎಸ್‌ಎಫ್‌ಸಿ 2019 ದಿ: 23-10-2019ರ ಮಾರ್ಗಸೂಚಿಗಳನ್ವಯ ಆಹಾರ ಪೂರೈಕೆಗೆ ತಗಲುವ ಸಹಾಯಧನದ ಶೇ30ರಷ್ಟನ್ನು ಕಾರ್ಮಿಕ ಇಲಾಖೆಯಿಂದ ಪಡೆಯುವುದು, ಬಾಕಿ ಶೇ70ರಷ್ಟು ಸಹಾಯಧನವನ್ನು ಮಹಾನಗರ ಪಾಲಿಕೆಗಳು ಸ್ವಂತ ಅನುದಾನದಿಂದ ಭರಿಸತಕ್ಕದ್ದು, ಉಳಿದ ಇತರೆ ನಗರ ಸ್ಥಳೀಯ ಸಂಸ್ಥೆಗಳಿಗೆ ಶೇ70ರಷ್ಟು ಸಹಾಯಧನವನ್ನು ನಗರಾಭಿವೃದ್ಧಿ ಇಲಾಖೆಯಿಂದ ಒದಗಿಸಲಾಗುವುದು. ಅದರಂತೆ, ಸರ್ಕಾರದಿಂದ ಬಿಡುಗಡೆಯಾಗಿರುವ

		ಆಹಾರ ಸಹಾಯಧನದ ವಿವರಗಳನ್ನು **ಅನುಬಂಧ-2 ರಲ್ಲಿ** ಹಾಗೂ ನಿರ್ದೇಶನಾಲಯದಿಂದ ಜಿಲ್ಲೆಗಳಿಗೆ ಬಿಡುಗಡೆ ಮಾಡಲಾಗಿರುವ ಸಹಾಯಧನದ ವಿವರಗಳನ್ನು **ಅನುಬಂಧ-3ರಲ್ಲಿ ಒದಗಿಸಿದೆ.**
3.	ಉಡುಪಿ ಜಿಲ್ಲೆಯಲ್ಲಿ ಎಷ್ಟು ಇಂದಿರಾ ಕ್ಯಾಂಟೀನ್‌ಗಳು ಕಾರ್ಯ ನಿರ್ವಹಿಸುತ್ತಿವೆ; ಇವುಗಳ ಆಹಾರ ತಯಾರಿಕೆಗಾಗಿ ಟೆಂಡರ್ ಪಡೆದ ಗುತ್ತಿಗೆದಾರರ ಹೆಸರು ಮತ್ತು ವಿಳಾಸ ನೀಡುವುದು;	ಉಡುಪಿ ಜಿಲ್ಲೆಯಲ್ಲಿ ಒಟ್ಟು 04 ಇಂದಿರಾ ಕ್ಯಾಂಟೀನ್‌ಗಳಿವೆ. ಉಡುಪಿ ಜಿಲ್ಲೆಯ ಇಂದಿರಾ ಕ್ಯಾಂಟೀನ್‌ಗಳ ಆಹಾರ ತಯಾರಿಕೆಗಾಗಿ ಗುತ್ತಿಗೆ ಪಡೆದಿರುವ ಗುತ್ತಿಗೆದಾರ ಸಂಸ್ಥೆಯ ಹೆಸರು ಮೆ। ಭಾರತೀಯ ಮಾನವ ಕಲ್ಯಾಣ ಪರಿಷದ್, ನವದೆಹಲಿ. ವಿಳಾಸ: #3, ಒಂದನೇ ಮಹಡಿ, 2ನೇ ಮುಖ್ಯರಸ್ತೆ, ಜೆ.ಸಿ.ನಗರ, ಬೆಂಗಳೂರು – 560006.
4.	ಇಂದಿರಾ ಕ್ಯಾಂಟೀನ್‌ಗಳಲ್ಲಿ ಟೀ. ಹಾಲು, ಕಾಫಿ, ಪಾನೀಯಗಳನ್ನು ಪೂರೈಸುವ ಉದ್ದೇಶ ಸರ್ಕಾರದ ಮುಂದಿದೆಯೇ; ಹಾಲು ಉತ್ಪಾದಕ ಸಂಘಗಳಿಂದ ಇಂದಿರಾ ಕ್ಯಾಂಟೀನ್‌ಗಳಲ್ಲಿ ಕಾಫಿ, ಟೀ ಔಟ್‌ಲೆಟ್ ಸ್ಥಾಪಿಸುವ ಉದ್ದೇಶವಿದೆಯೇ?	ಇಂದಿರಾ ಕ್ಯಾಂಟೀನ್‌ಗಳಲ್ಲಿ ಟೀ, ಹಾಲು, ಕಾಫಿ, ಪಾನೀಯಗಳನ್ನು ಪೂರೈಸುವ ಹಾಗೂ ಹಾಲು ಉತ್ಪಾದಕ ಸಂಘಗಳಿಂದ ಕಾಫಿ, ಟೀ ಔಟಲೆಟ್ ಸ್ಥಾಪಿಸುವ ಯಾವುದೇ ಯೋಜನೆಗಳು ಇರುವುದಿಲ್ಲ.

ಕಡತ ಸಂಖ್ಯೆ:ನಅಇ 186 ಎಸ್.ಎಫ್.ಸಿ 2021

(ಎನ್. ನಾಗರಾಜ್, ಎಂ.ಟಿ.ಬಿ)
ಪೌರಾಡಳಿತ ಹಾಗೂ ಸಕ್ಕರೆ ಸಚಿವರು